> ಸ್ತ್ರೀಮತವನುತ್ತರಿಸಲಾಗದೇ? – ಕುಮಾರವ್ಯಾಸನಂತಹ ಕವಿ ಇಂಥ ಪರಮಸತ್ಯವನ್ನು ಅರ್ಥ ಮಾಡಿಕೊಂಡಿದ್ದ ಅನ್ನೋದಿದೆಯಲ್ಲ, ಅದು ಸಾಹಿತ್ಯ ಎನ್ನುವುದು ಯಾವತ್ತೂ ಸತ್ಯದ ವಾರಸುದಾರಿಕೆಯನ್ನು ಎತ್ತಿ ಹಿಡಿಯುತ್ತೆ ಅನ್ನೋದನ್ನು ಹೇಳುತ್ತೆ ಮತ್ತು ಆ ಸತ್ಯದಲ್ಲಿ ಗಂಡು ಮುಚ್ಚಿಡಬಯಸುವ ಹಲವು ಸ್ತ್ರೀ ಸತ್ಯಗಳು ಹೊರಗೆ ಬರುತ್ತೆ ಅನ್ನೋದನ್ನೂ ಅದು ಹೇಳುತ್ತೆ...

ನಾರಿಕೇಳಾ ಅಂತ ಬಂದಾಗ ಆಗ ನನಗೆ ಅನಿಸಿದ್ದೇನೆಂದರೆ, ನಿಜವಾಗಿ ಹೆಣ್ಣಿಗೆ ಲೋಕದ ಬಂಧನಗಳು ಹೆಚ್ಚು ಕಠಿಣವೋ ಅಥವಾ ತನಗೆ ತಾನೇ ಹಾಕಿಕೊಳ್ಳುತ್ತಿರುವ ಬಂಧನಗಳು ಹೆಚ್ಚಿನದೋ ಎಂಬ ಪ್ರಶ್ನೆ ಹಾಕಿಕೊಂಡಾಗ 'ಅಮೆಜಾನ್ ದಾಟಬಹುದು ಅನುದಿನದ ಅಂತರಗಂಗೆಯನ್ನು ದಾಟುವುದು ಹೇಗೆ?', ನಾವು ಈ ಲೋಕವನ್ನು ಎದುರಿಸಬಹುದು ಆದರೆ ನನ್ನನ್ನು ನಾನು ಎದುರಿಸುವುದು ಕಷ್ಟ ಎಂದೇ ನನಗನ್ನಿಸುತ್ತದೆ. ನಾರಿಕೇಳಾ ಎಂದರೆ ಹೆಣ್ಣಿನ ಮಾತನ್ನು ಲೋಕ ಕೇಳಿಸಿಕೊಳ್ಳಬೇಕು ಅನ್ನೋದಲ್ಲ. ಹೆಣ್ಣಿನ ಮಾತನ್ನು ಹೆಣ್ಣೇ ಕೇಳಿಸಿಕೊಳ್ಳಬೇಕು ಅನ್ನೋದೂ ಇದೆ ಅಲ್ಲಿ. 'ಬೆಳಕಿಗಿಂತ ಬೆಳ್ಳಗೆ' ಬಗೆಗೆ ಹೇಳುವುದಾದರೆ, ಸತ್ಯ ಅನ್ನುವುದನ್ನು ನಾವು ಯಾವತ್ತೂ ಬಿಳುಪು ಅಂತ ನೋಡತೀವಿ. ಬಿಳುಪು ಅನ್ನೋದು ಸತ್ಯವೂ ಹೌದು, ಸೌಂದರ್ಯವೂ ಹೌದು. ಸ್ತ್ರೀಸಂಕಥನ ಅನ್ನೋದು ಶಕ್ತಿ ಮತ್ತು ಸೌಂದರ್ಯದ ಸಮೀಕರಣ. ಹೆಣ್ಣಿನ ಚೈತನ್ಯ ಶಕ್ತಿ ಅಸಾಮಾನ್ಯವಾದದ್ದು. ತನ್ನ ಚೈತನ್ಯ ಶಕ್ತಿಯನ್ನು ಹೆಣ್ಣು ತನಗೆ ತಾನೇ ಮನದಟ್ಟು ಮಾಡಿಕೊಳ್ಳುವ ಪ್ರಕ್ರಿಯೆ ಇದೆಯಲ್ಲ, ಅದೊಂದು ನಿರ್ಣಾಯಕವಾದ ಸಂಗತಿ. ಇದನ್ನು ಹೇಳುವ ಕಾರಣಕ್ಕೆ ಈ ಶೀರ್ಷಿಕೆ ಬಳಕೆಯಾಗಿದೆ.

ಸ್ವಗತ, ಆತ್ಮವಿಮರ್ಶೆ ಮತ್ತು ಹಕ್ಕೊತ್ತಾಯವನ್ನು ಧ್ವನಿಸುವ ಈ ಎಲ್ಲ ಶೀರ್ಷಿಕೆಗಳು ಮತ್ತು ಬರಹಗಳು ಹೆಣ್ಣಿನ ಬಗೆಗೆ, ಗಂಡಿನ ಬಗೆಗೆ ಮತ್ತು ಈ ಲೋಕದ ಬಗೆಗೆ ನನ್ನೊಳಗೆ ಆಗಿರುವ, ಆಗುತ್ತಿರುವ ದೃಷ್ಟಿಕೋನ ವಿಕಾಸದ ದಿಕ್ಸೂಚಿಗಳಂತೆ ನನಗೆ ಕಾಣಿಸುತ್ತವೆ.

◆ **ನಿಮ್ಮ ಬಹಳಷ್ಟು ಲೇಖನಗಳನ್ನು ಓದಿದಾಗ ಅನಿಸುವುದೇನೆಂದರೆ, ಈ ಬರಹಗಳಿಗೆ ವಿಸ್ತಾರ, ಹರವು ಮತ್ತು ದೀರ್ಘ ಲೇಖನ ಆಗುವಷ್ಟು ವಿಷಯ ಸಾಮಗ್ರಿ ಇದ್ದೂ ಎರಡುಮೂರು ಪುಟಗಳಲ್ಲಿ ಮುಕ್ತಾಯ ಕಾಣುತ್ತೆ... ಏನೇ ಬರೆದರೂ ಅದು ಸಂಕ್ಷಿಪ್ತವಾಗಿರಬೇಕು ಎಂಬ ನಿಮ್ಮ ಧೋರಣೆಯೇ ಇದಕ್ಕೆ ಕಾರಣವೇ? ಜೊತೆಗೆ ನಿಮ್ಮ ಚಿಂತನೆಯ ಶೈಲಿ ತೀರಾ ಅಕಡೆಮಿಕ್ ಆಗಿದ್ದು ಅದು ನಿಮ್ಮ ಬರಹದ ಮಿತಿ ಎಂಬ ವಿಮರ್ಶೆ ಇದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಯಾವ ಸ್ವಬಂಧನದ ಬಗ್ಗೆ ನಾನು ಯಾವಾಗಲೂ ಮಾತಾಡ್ತೀನೋ ಅದನ್ನು ಇಲ್ಲಿ ನನಗೆ ನಾನೇ ಅನ್ವಯಿಸಿಕೊಳ್ಳುತ್ತೇನೆ. ಬದುಕಿನ ಎಲ್ಲವುಗಳ ಬಗ್ಗೆ ನನಗೆ ಸಮಾನ ಆಸಕ್ತಿ ಇದೆ. ಚೆಂದದ ಸೀರೆ ಆರಿಸ್ಕೋಬೇಕು, ಮನೆಯನ್ನು ಚೆನ್ನಾಗಿ ಇಟ್ಕೋಬೇಕು. ಒಳ್ಳೆಯ ಅಡುಗೆ ಮಾಡಿ ಊಟ ಮಾಡಬೇಕು. ಪಾಠದ ತಯಾರಿ ನಡೆಸಬೇಕು... ಈ ಎಲ್ಲದಕ್ಕೂ ಸಮಯ ಕೊಡಬೇಕು ಎನ್ನುವ ಒತ್ತಡದಲ್ಲಿ ಆದಷ್ಟು ಬೇಗ ಈ ಬರಹ ಮುಗಿಸಿಬಿಡಬೇಕು ಎನ್ನುವ ಧಾವಂತವೂ ಸೇರಿರುತ್ತದೆ. ಇದು ನನಗೆ ನಾನೇ ಸೃಷ್ಟಿಸಿಕೊಂಡಿದ್ದು. ಜೊತೆಗೆ ಸಂಕ್ಷಿಪ್ತವಾಗಿ ಹೇಳುವುದರಲ್ಲಿ ನನಗಿರುವ ನಂಬಿಕೆಯು ಇದಕ್ಕೆ ಕಾರಣ. ಸಂಕ್ಷಿಪ್ತದಲ್ಲಿಯೇ ಸಮಗ್ರತೆ ಕಾಣುವವಳು ನಾನು. ಜೊತೆಗೆ ಕೆಲವರ